# ಸರ್ಕಾರಿ ಪ್ರೌಢಶಾಲೆ, ಹೆಬ್ಬಲಗುಪ್ಪೆ, ಹೆಚ್.ಡಿ. ಕೋಟೆ. ದ್ವಿತೀಯ ಸೆಮಿಸ್ಟರ್

**ತರಗತಿ: 8ನೇ** **ಸಮಯ: 90 ನಿಮಿಷ**

**ವಿಷಯ: ವಿಜ್ಞಾನ** **ಅಂಕಗಳು: 40**

**I. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 4X1=4**

1. ಪರದೆಯ ಮೇಲೆ ಹಿಡಿಯಲು ಸಾಧ್ಯವಾಗದ ಪ್ರತಿಬಿಂಬ ____________

ಅ) ಸತ್ಯ ಪ್ರತಿಬಿಂಬ ಬಿ) ಸಾಧಾರಣ ಪ್ರತಿಬಿಂಬ ಸಿ) ಮಿಥ್ಯ ಪ್ರತಿಬಿಂಬ ಡಿ) ಉತ್ತಮ ಪ್ರತಿಬಿಂಬ

2. ಭಾರತದ ಹಸಿರು ಕ್ರಾಂತಿಯ ಪಿತಾಮಹ ______________

ಅ) ಡಾರ್ವಿನ್ ಬಿ) ಜೆ.ಸಿ ಬೋಸ್ ಸಿ) ಎಂ.ಎಸ್. ಸ್ವಾಮಿನಾಥನ್ ಡಿ) ಹೇಮೇಂದ್ರ ನಾಥ ಚಟರ್ಜಿ

3. ಅರ್ಜಿತ ಗುಣಲಕ್ಷಣಗಳ ಅನುವಂಶೀಯತೆಯ ಸಿದ್ಧಾಂತವನ್ನು ಪ್ರತಿಪಾದಿಸಿದ ಪ್ರಾಣಿಶಾಸ್ತ್ರಜ್ಞ _________

ಅ) ಜೀನ್ ಬ್ಯಾಪಿಸ್ಟ್ ಲಮಾರ್ಕ್ ಬಿ) ಚಾರ್ಲ್ಸ್ ಡಾರ್ವಿನ್ ಸಿ) ಹಾಲ್ಡೇನ್ ಡಿ) ಒಪ್ಯಾರಿನ್

4. ಇದನ್ನು ಜೈವಿಕ ಫಲವತ್ಕಾರಕವಾಗಿ ಬಳಸುವರು__________________

ಅ) ಅಮೋನಿಯಂ ಫಾಸ್ಫೇಟ್ ಬಿ) ಎನ್.ಪಿ.ಕೆ. ಸಿ) ಯೂರಿಯಾ ಡಿ) ಅಜೊಟೊಬ್ಯಾಕ್ಟರ್

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 3X1=3**

5. ಜಲಾನಿಲದ ಯಾವುದಾದರು ಒಂದು ಅನ್ವಯ ತಿಳಿಸಿ.

6. ದ್ರಾವಕ ಎಂದರೇನು?

7. ತೆರೆದ ಪತ್ರರಂಧ್ರದ ಚಿತ್ರ ಬಿಡಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 4X2=8**

8. ಕೈಗಾರಿಕಾ ಬಾಯ್ಲರ್ ಗಳ ಮೇಲೆ ಗಡಸು ನೀರಿನ ದುಷ್ಪರಿಣಾಮವೇನು?

9. ದ್ವಿಲೋಹ ಪಟ್ಟಿಯ ಯಾವುದಾದರೂ ಎರಡು ಅನ್ವಯಗಳನ್ನು ಬರೆಯಿರಿ.

10. ವೈಜ್ಞಾನಿಕ ಕಾರಣ ಕೊಡಿ.

ಅ) ಅನಿಲಗಳಿಗೆ ನಿರ್ದಿಷ್ಟ ಆಕಾರ ಇಲ್ಲ

ಬಿ) ನಿಲಂಬನಗಳ ಮೂಲಕ ಬೆಳಕನ್ನು ಹಾಯಿಸಿದಾಗ ಬೆಳಕಿನ ಪಥ ಕಾಣಿಸುತ್ತದೆ.

11. ನಿಮ್ಮ ಶಾಲೆಯ ಕೈತೋಟಕ್ಕಾಗಿ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸುವ ಚಟುವಟಿಕೆಯೊಂದನ್ನು ಶಿಕ್ಷಕರು ನೀಡಿದರೆ ಹೇಗೆ ತಯಾರಿಸುವಿರಿ? ವಿವರಿಸಿ.

**IV.** <u>ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.</u> **4X3=12**

12. ನಿರ್ವಾತದಲ್ಲಿ ಶಬ್ದವು ಪ್ರಸಾರವಾಗುವುದಿಲ್ಲ ಎಂಬುದನ್ನು ತೋರಿಸುವ ಉಪಕರಣಗಳ ಜೋಡಣೆಯ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

13. ಗೋಳೀಯ ದರ್ಪಣದ ಎರಡು ಬಗೆಗಳನ್ನು ಹೆಸರಿಸಿ. ಅವುಗಳ ಒಂದೊಂದು ಅನ್ವಯ ತಿಳಿಸಿ.

14. ಡಾರ್ವಿನ್ ರವರ ಪ್ರಕಾರ ಭಿನ್ನತೆ ಎಂದರೇನು? ಅದರ ಆಧಾರದ ಮೇಲೆ ಅರ್ಹ ಜೀವಿಯ ಉಳಿವು ಹಾಗು ನಿಸರ್ಗದ ಆಯ್ಕೆ ಪ್ರಕ್ರಿಯೆಯನ್ನು ಹೇಗೆ ವಿವರಿಸಲಾಗಿದೆ?

15. ಭೂಕೇಂದ್ರೀಯ ಮತ್ತು ಸೌರಕೇಂದ್ರೀಯ ವ್ಯವಸ್ಥೆ ಗಿರುವ ವ್ಯತ್ಯಾಸವೇನು? ಸೌರಕೇಂದ್ರೀಯ ವ್ಯವಸ್ಥೆಯನ್ನು ಪ್ರತಿಪಾದಿಸಿದವರು ಯಾರು?

**V.** <u>ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.</u> **2X4=8**

16. ಮಾನವನ ಶ್ವಾಸಕೋಶದ ರಚನೆಯ ಚಿತ್ರ ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ.

1. ಶ್ವಾಸನಾಳ 2. ಬ್ರಾಂಕಿಯೋಲ್ 3. ಬ್ರಾಂಕಸ್ 4. ಆಲ್ವಿಯೋಲೈ

17. O.R.S ವಿಸ್ತರಿಸಿ. ಅದನ್ನು ಹೇಗೆ ತಯಾರಿಸುವಿರಿ? 1950 ರ ದಶಕದಲ್ಲಿ ಕಾಲರಾ ರೋಗ ಪೀಡಿತರಿಗೆ O.R.S ಚಿಕಿತ್ಸೆ ನೀಡಿ ಉತ್ತಮ ಫಲಿತಾಂಶ ಪಡೆದ ಭಾರತೀಯ ವೈದ್ಯ ಯಾರು?

**VI.** <u>ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.</u> **1X5=5**

18. ಆವೃತ ಬೀಜ ಸಸ್ಯಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿಯು ಒಳಗೊಂಡಿರುವ 2 ಪ್ರಕ್ರಿಯೆಗಳನ್ನು ತಿಳಿಸಿ. ಸ್ವಕೀಯ ಮತ್ತು ಪರಕೀಯ ಪರಾಗಸ್ಪರ್ಶ ಕ್ರಿಯೆಗಳ ವ್ಯತ್ಯಾಸವೇನು? ಚಿಟ್ಟೆ, ದುಂಬಿಗಳಂತಹ ಕೀಟಗಳನ್ನು ಆಕರ್ಷಿಸಲು ಸಾಮಾನ್ಯವಾಗಿ ಹೂವುಗಳಲ್ಲಿ ಕಂಡುಬರುವ ವಿಶೇಷ ಮಾರ್ಪಾಡುಗಳೇನು?